

بسم اللهِ الرّحمٰنِ الرّحيم

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅವರ ಶುಕ್ರವಾರ ಖುತುಬದ ಸಾರಾಂಶ – 14.03.2014

# ಅಲ್ಲಾಹನ ಬಗ್ಗೆ ಸರಿಯಾದ ಜ್ಞಾನವನ್ನು ಗಳಿಸುವ ಮಾರ್ಗಗಳು

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:

ಕೆಲವು ಜುಮುಅಗಳ ಹಿಂದಿನ ತನಕ ನಾನು ನಮ್ಮ ವರ್ತನೆಗಳ ಸುಧಾರಣೆ ಹೇಗೆ ಮಾಡಬಹುದು ಎನ್ನುವುದರ ಬಗ್ಗೆ ಕೆಲವು ಖುತುಬಗಳಲ್ಲಿ ವಿವರಿಸಿದ್ದೆನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನನ್ನು ಹೇಗೆ ವಿವರಿಸಿಕೊಟ್ಟಿದ್ದಾರೆ; ಅಲ್ಲಾಹನ ಬಗ್ಗೆ ಜ್ಞಾನ ಮತ್ತು ಪ್ರೀತಿಗಳಿಸುವ ಯಾವೆಲ್ಲಾ ಮಾರ್ಗಗಳನ್ನು ಹೇಳಿರುವರು; ಅಲ್ಲಾಹನ ಸಾಮೀಪ್ಯಗಳಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಯಾವರೀತಿ ಮಾರ್ಗದರ್ಶನ ನೀಡಿರುವರು; ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅವತೀರ್ಣಗೊಳಿಸಿದ ಸಂದೇಶವಾಣಿಗಳ ಬಗ್ಗೆ ಮತ್ತು ಅವರಿಗೆ ಬೆಂಬಲವಾಗಿ ಅಲ್ಲಾಹನು ತೋರಿಸಿದ ದೃಷ್ಟಾಂತಗಳು ಯಾವ ರೀತಿ ಭವ್ಯವಾಗಿ ಪ್ರಕಟಗೊಂಡವು ಎನ್ನುವುದರ ಬಗ್ಗೆ ವಿವರಿಸಿದ್ದೆನು. ಇವೆಲ್ಲವುಗಳ ಬಗ್ಗೆ ಜ್ಞಾನವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಲೇಖನಗಳಿಂದ ನಾವು ಪಡೆಯಬೇಕಾಗಿದೆ. ಅವುಗಳು ನಮ್ಮ ವಿಶ್ವಾಸವನ್ನೂ ನಮ್ಮ ನಡೆವಳಿಕೆಗಳನ್ನೂ ಉತ್ತಮಗೊಳಿಸಲು ಸಹಾಯಕವಾಗುವುವು.

ಈ ದಿನ ನಾನು ಇವುಗಳಿಗೆ ಸಂಬಂಧಿಸಿ ಕೆಲವು ಪ್ರಸ್ತಾವನೆಗಳನ್ನೂ ಉಪದೇಶಗಳನ್ನೂ ಉದಾಹರಣೆ ರೂಪದಲ್ಲಿ ನಿಮ್ಮ ಮುಂದೆ ಇರಿಸುತ್ತೇನೆ. ಅಲ್ಲಾಹನ ಕುರಿತು ಜ್ಞಾನಗಳಿಸುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬರೆದುದನ್ನು ವಿವರಿಸುವುದಾದರೆ ಅವುಗಳು ನೂರಾರು ಪುಟಗಳಷ್ಟಾಗುವುವು. ಆದರೆ ನಾನು ಹೇಳಿದ ಹಾಗೆ ಉದಾಹರಣೆ ರೂಪದಲ್ಲಿ ಕೆಲವು ಉಲ್ಲೇಖಗಳನ್ನು ಮಾತ್ರ ನಿಮ್ಮ ಮುಂದೆ ಇರಿಸುತ್ತೇನೆ. ಅಲ್ಲಾಹನ ಬಗ್ಗೆ ಜ್ಞಾನಗಳಿಸುವುದು ಎಂದರೆ ಏನೆಂದು ಅವು ನಮಗೆ ಮಾರ್ಗದರ್ಶನ ನೀಡುವುವು.

ಅಲ್ಲಾಹನ ಸಾಮೀಪ್ಯಗಳಿಸುವ ವಿಧಾನಗಳ ಬಗ್ಗೆ ಮಾರ್ಗದರ್ಶನ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಅಲ್ಲಾಹನ ಸಾಮೀಪ್ಯಗಳಿಸಲು ಎರಡು ಆವಶ್ಯಕತೆಗಳನ್ನು ಈಡೇರಿಸಬೇಕಾಗಿದೆ. ಒಂದನೆಯದಾಗಿ ಕೆಡುಕುಗಳಿಂದ ದೂರವಿರಬೇಕು. ಎರಡನೆಯದಾಗಿ ಸತ್ಕರ್ಮಗಳನ್ನು ಮಾಡಬೇಕು. ಕೇವಲ ಕೆಟ್ಟ ಕೆಲಸಗಳನ್ನು ಬಿಟ್ಟು ಬಿಡುವುದು ನೈಪುಣ್ಯವೇನೂ ಅಲ್ಲ, ಮನುಷ್ಯನ ಜನನ ಪ್ರಾರಂಭವಾದ ಕಾಲದಿಂದಲೇ ಅವನ ಪ್ರಕೃತಿಯಲ್ಲಿ ಈ ಎರಡು ಶಕ್ತಿಗಳು ಅಡಕವಾಗಿದೆ. ಒಂದು ಕಡೆ ಮನುಷ್ಯನ ಶಾರೀರಿಕ ಭಾವನೆಗಳು ಅವನನ್ನು ಪಾಪದ ಕಡೆಗೆ ತಿರುಗುವಂತೆ ಮಾಡುತ್ತದೆ. ಇನ್ನೊಂದು ಕಡೆ ಅಲ್ಲಾಹನ ಬಗ್ಗೆ ಪ್ರೀತಿ ಎಂಬ ಅಗ್ನಿ ಅವನ ಪ್ರಕೃತಿಯಲ್ಲಿ ರಹಸ್ಯವಾಗಿರುತ್ತದೆ. ಅದು ಪಾಪವೆಂಬ ಕಲ್ಮಷಗಳನ್ನು ಹೇಗೆ ಸುಟ್ಟು ಹಾಕುತ್ತವೆ ಎಂದರೆ ವಾಸ್ತವಿಕ ಬೆಂಕಿಯು ಕಸಕಡ್ಡಿಗಳನ್ನು ಸುಟ್ಟು ಹಾಕುವ ಹಾಗೆ. ಆದರೆ ಈ ಆಧ್ಯಾತ್ಮಿಕವಾದ ಬೆಂಕಿ ಪ್ರಜ್ವಲಿಸಿ ಪಾಪಗಳನ್ನು ಸುಡುವ ಸಾಮರ್ಥ್ಯಗಳಿಸುವುದು ಅಲ್ಲಾಹನ ಬಗ್ಗೆ ಜ್ಞಾನಗಳಿಸುವುದನ್ನು ಹೊಂದಿಕೊಂಡಿರುತ್ತದೆ. ಅಲ್ಲಾಹನ ಬಗ್ಗೆ ಜ್ಞಾನವನ್ನು ಗಳಿಸಿದರೆ ಮಾತ್ರ ಆ ಅಗ್ನಿ ಪ್ರಜ್ವಲಿಸಿ ಸುಡುವುದು. ಒಂದು ವಸ್ತುವನ್ನು ಪ್ರೀತಿಸುವುದು ಆ ವಸ್ತುವಿನ ಬಗ್ಗೆ ಗಳಿಸಿದ ಜ್ಞಾನವನ್ನು ಹೊಂದಿಕೊಂಡಿರುತ್ತದೆ. ಯಾವ ವಸ್ತುವಿನ ಸೌಂದರ್ಯ ಮತ್ತು ಒಳಿತುಗಳ ಬಗ್ಗೆ ನಿಮಗೆ ತಿಳಿದಿಲ್ಲವೋ ಅದರ ಬಗ್ಗೆ ಪ್ರೇಮ ಉಂಟಾಗಲಾರದು. ಮಹೋನ್ನತನಾದ ಅಲ್ಲಾಹನ ಒಳಿತು ಮತ್ತು ಸೌಂದರ್ಯದ ಜ್ಞಾನ ಗಳಿಸಿದರೆ ಮಾತ್ರ ಅವನ ಬಗ್ಗೆ ಪ್ರೀತಿ ಹುಟ್ಟುತ್ತದೆ. ಪ್ರೀತಿಯ ಬೆಂಕಿಯಿಂದ ಪಾಪವು ಸುಟ್ಟು ಹೋಗುತ್ತವೆ. ಆದರೆ ಅಲ್ಲಾಹನ ನಡೆವಳಿಕೆ ಹೇಗೆ ಜಾರಿಯಲ್ಲಿದೆ ಎಂದರೆ ಅಲ್ಲಾಹನ ಬಗ್ಗೆ ಜ್ಞಾನವು ಸಾಮಾನ್ಯ ಜನರಿಗೆ ಪ್ರವಾದಿಗಳ ಮೂಲಕ ಲಭಿಸುತ್ತದೆ. ಪ್ರವಾದಿಗಳ ಪ್ರಕಾಶದಿಂದ ಅವರು ಪ್ರಕಾಶಗಳಿಸುತ್ತಾರೆ. ಪ್ರವಾದಿಗಳಿಗೆ ಲಭಿಸಿದವುಗಳನ್ನು ಅವರನ್ನು ಅನುಸರಿಸುವವರು ಸಹ ಪಡೆದುಕೊಳ್ಳುತ್ತಾರೆ.

ಅಲ್ಲಾಹನ ಬಗ್ಗೆ ಜ್ಞಾನಗಳಿಸುವಿಕೆ, ಪಾಪಗಳಿಂದ ವಿಮೋಚನೆ, ಸತ್ಕರ್ಮಗಳನ್ನು ಮಾಡುವ ಭಾಗ್ಯ ಲಭಿಸುವಿಕೆ ಮತ್ತು ಪ್ರಾರ್ಥನೆಯ ಮಟ್ಟವನ್ನು ಸುಧಾರಣೆ ಮಾಡುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

“ಅಲ್ಲಾಹನ ಅನುಗ್ರಹದಿಂದಲೂ ಕೃಪೆಯಿಂದಲೂ ಅಲ್ಲಾಹನ ಬಗ್ಗೆ ಜ್ಞಾನವನ್ನು ಸಂಪಾದಿಸಿ ಅವನಿಂದ ಶಕ್ತಿಗಳಿಸುವ ತನಕ ಯಾವ ಮನುಷ್ಯನೂ ವಾಸ್ತವಿಕವಾಗಿ ಪಾಪಗಳಿಂದ ವಿಮೋಚನೆ ಹೊಂದಲಾರನು ಮತ್ತು ಸತ್ಯವಾದ ರೀತಿಯಲ್ಲಿ ಅಲ್ಲಾಹನನ್ನು ಪ್ರೀತಿಸಲಾರನು ಮತ್ತು ಅಲ್ಲಾಹನಿಗೆ ಸರಿಯಾದ ರೀತಿಯಲ್ಲಿ ಭಯಪಡಲಾರನು. ಭಯ ಮತ್ತು ಪ್ರೀತಿ ಸರಿಯಾದ ಜ್ಞಾನದ ಮೂಲಕವೇ ಲಭಿಸುತ್ತವೆ ಎಂಬುದು ಅತ್ಯಂತ ಸ್ಪಷ್ಟವಾಗಿದೆ. ಲೋಕದಲ್ಲಿರುವ ಯಾವುದೇ ವಸ್ತುವನ್ನೂ ಮನುಷ್ಯನು ಗಮನಿಸುವುದಾಗಲೀ ಅದನ್ನು ಪ್ರೀತಿಸುವುದಾಗಲೀ ಅಥವಾ ಅದಕ್ಕೆ ಹೆದರುವುದಾಗಲೀ ಅದರಿಂದ ದೂರ ಸರಿಯುವುದಾಗಲೀ ಮಾಡುವುದು, ಆ ವಸ್ತುವಿನ ಬಗ್ಗೆ ಮನುಷ್ಯನ ಹೃದಯದಲ್ಲಿ ಸರಿಯಾದ ಜ್ಞಾನ ಉಂಟಾದಾಗ ಮಾತ್ರ. ಆದರೆ ಅಲ್ಲಾಹನ ಅನುಗ್ರಹ ದೊರಕದಿದ್ದರೆ ಜ್ಞಾನ ಲಭಿಸದು ಎನ್ನುವುದು ಸತ್ಯವಾಗಿದೆ. ಅಲ್ಲಾಹನ ಅನುಗ್ರಹವಿಲ್ಲದಿದ್ದರೆ ಜ್ಞಾನವು ಲಾಭಕರವೂ ಆಗಲಾರದು.

ಅಲ್ಲಾಹನ ಅನುಗ್ರಹದ ಮೂಲಕವೇ ಜ್ಞಾನ ಲಭಿಸುತ್ತದೆ. ನಾವು ಪ್ರತಿ ದಿನ ಪ್ರಾರ್ಥನೆ ಮಾಡುತ್ತೇವೆ, ಪ್ರಾರ್ಥನೆಯಿಂದ ತುಂಬಿದ ನಮಾಝ್ ಮಾಡುತ್ತೇವೆ ಎಂದು ಯೋಚಿಸಬೇಡಿರಿ. ಅಲ್ಲಾಹನ ಬಗ್ಗೆ ಜ್ಞಾನಗಳಿಸಿದ ನಂತರ ಮಾಡುವ ಪ್ರಾರ್ಥನೆಯು ಬೇರೆಯೇ ಒಂದು ಬಣ್ಣವನ್ನು ಹೊಂದಿರುತ್ತದೆ. ಅದು ದೇವನಲ್ಲಿ ಲೀನನನ್ನಾಗಿ ಮಾಡುತ್ತದೆ. ಅದು ಸುಟ್ಟು ಹಾಕುವ ಬೆಂಕಿಯ ಹಾಗೆ ಇರುತ್ತದೆ. ಅದು ದೇವನ ಅನುಗ್ರಹವನ್ನು ಸೆಳೆಯುವ ಚುಂಬಕ ಆಕರ್ಷಣೆಯಾಗಿರುತ್ತದೆ. ಅದು ಮೃತಾವಸ್ಥೆ ಆಗಿದ್ದರೂ ಕೊನೆಗೆ ಅದು

ಜೀವಂತಗೊಳಿಸುತ್ತದೆ. ಅದು ಒಂದು ದೀಪವಾಗಿ ಬೆಳಗುತ್ತದೆ. ಅದು ಉಕ್ಕಿಹರಿವ ನೆರೆಯಾಗಿದ್ದರೂ ಕೊನೆಗೆ ಅದು ರಕ್ಷಣೆಯ ನೌಕೆಯಾಗುತ್ತದೆ. ಕೆಟ್ಟುಹೋದ ಪ್ರತಿಯೊಂದು ವಸ್ತು ಅದರಿಂದ ಸರಿಯಾಗುತ್ತದೆ. ವಿಷ ಅದರ ಮೂಲಕ ವಿಷಹಾರಕವಾಗುತ್ತದೆ. ಇದುವೇ ಜ್ಞಾನದ ನಿಜವಾದ ಪರಿಚಯ.

ಹಲವರು ನಾಲಗೆಯಿಂದ ಅಲ್ಲಾಹನ ಅಸ್ತಿತ್ವವನ್ನು ಅಂಗೀಕರಿಸುತ್ತಾರೆ. ಆದರೆ ಅವರನ್ನು ಪರೀಕ್ಷಿಸಿದರೆ ಅವರೊಳಕೆ ನಾಸ್ತಿಕತೆ ಇರುವುದು ಕಾಣಿಸುತ್ತದೆ. ಏಕೆಂದರೆ ಲೌಕಿಕ ಕೆಲಸಗಳಲ್ಲಿ ಅವರು ಮಗ್ನರಾಗಿರುವಾಗ ಅಲ್ಲಾಹನ ಕೋಪ ಮತ್ತು ಅವನ ಮಹೋನ್ನತ ಸ್ಥಿತಿಯನ್ನು ಸಂಪೂರ್ಣವಾಗಿ ಮರೆತು ಬಿಡುತ್ತಾರೆ. ಆದುದರಿಂದ ನೀವೆಲ್ಲರೂ ಪ್ರಾರ್ಥನೆ ಮೂಲಕ ಅಲ್ಲಾಹನ ಬಗ್ಗೆ ಜ್ಞಾನವನ್ನು ಬೇಡಿಕೊಳ್ಳುವುದು ಆವಶ್ಯಕವಾಗಿದೆ. ಜ್ಞಾನ ಲಭಿಸದಿದ್ದರೆ ಅಲ್ಲಾಹನ ಬಗ್ಗೆ ದೃಢ ವಿಶ್ವಾಸ ಲಭಿಸಲು ಖಂಡಿತವಾಗಿ ಸಾಧ್ಯವಾಗದು. ಅಲ್ಲಾಹನಿಂದ ಸಂಬಂಧವನ್ನು ವಿಚ್ಛೇಧಿಸುವುದು ಒಂದು ಮೃತ್ಯುವಿಗೆ ಸಮ ಎಂಬ ತಿಳುವಳಿಕೆ ಲಭಿಸಿದರೆ ಮಾತ್ರ ಇದು ಸಾಧ್ಯವಾಗುವುದು. ಪಾಪಗಳಿಂದ ರಕ್ಷಣೆ ಪಡೆಯಲು ಪ್ರಾರ್ಥಿಸುವುದರ ಜೊತೆಗೆ ಅದಕ್ಕೆ ಪೂರಕವಾದ ಕೆಲಸಗಳನ್ನು ಸಹ ಮಾಡಬೇಕು. ಯಾವ ಸಭೆ ಸಮಾರಂಭಗಳನ್ನು ಸೇರುವುದರಿಂದ ಪಾಪಕೃತ್ಯಗಳಿಗೆ ಪ್ರಚೋದನೆ ಉಂಟಾಗುತ್ತದೆಯೋ ಅಂತಹುಗಳಿಂದ ದೂರ ಸರಿಯಿರಿ. ಹೀಗೆ ಮಾಡಿ ಅದರೊಂದಿಗೆ ಪ್ರಾರ್ಥನೆ ಸಹ ಮಾಡಿರಿ.''

ಅಲ್ಲಾಹನ ಬಗ್ಗೆ ಸರಿಯಾದ ಜ್ಞಾನವನ್ನು ಗಳಿಸದೆ ಪಾಪಕೃತ್ಯಗಳಿಂದ ರಕ್ಷಣೆ ದೊರಕಲಾರದು ಎನ್ನುವುದರ ಬಗ್ಗೆ ಮತ್ತೂ ವಿವರಣೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

''ನೀವು ದೃಢವಾಗಿ ತಿಳಿದುಕೊಳ್ಳಿರಿ. ಪಾಪದಿಂದ ರಕ್ಷಣೆ ಪಡೆಯಲು ಭಾಗ್ಯಸಿಗುವುದು ಮನುಷ್ಯನು ಅಲ್ಲಾಹನ ಬಗ್ಗೆ ಪೂರ್ಣರೂಪದಲ್ಲಿ ವಿಶ್ವಾಸವನ್ನು ಹೊಂದಿರುವಾಗ ಮಾತ್ರವಾಗಿದೆ. ಮನುಷ್ಯನ ಜೀವಿತದ ಬಹಳ ದೊಡ್ಡ ಉದ್ದೇಶಲಕ್ಷ್ಯ ಪಾಪದಿಂದ ರಕ್ಷಣೆ ಪಡೆಯುವುದಾಗಿದೆ. ನೀವು ನೋಡಿರಿ ಒಂದು ಸರ್ಪ ಸುಂದರವಾಗಿ ಕಂಡರೆ ಒಂದು ಮಗು ಅದನ್ನು ಹಿಡಿಯುವ ಆಶೆ ಹೊಂದಬಹುದು ಮತ್ತು ಅದನ್ನು ಹಿಡಿಯಲು ಕೈ ಚಾಚಬಹುದು. ಆದರೆ ಸರ್ಪ ಕಚ್ಚಬಹುದು ಮತ್ತು ತನ್ನನ್ನು ಕೊಲ್ಲಬಹುದು ಎಂಬ ಜ್ಞಾನವಿರುವ ಬುದ್ಧಿಶಾಲಿಯಾದ ಓರ್ವ ಮನುಷ್ಯ ಅದರ ಸಮೀಪಕ್ಕೆ ಸಹ ಹೋಗಲು ಧೈರ್ಯ ಹೊಂದಲಾರನು. ಒಂದು ಸ್ಥಳದಲ್ಲಿ ಸರ್ಪವಿದೆ ಎಂದು ತಿಳಿದರೆ ಅವನು ಅಲ್ಲಿಗೆ ಪ್ರವೇಶಿಸಲಾರನು. ಇದೇ ರೀತಿ ವಿಷ ಸೇವಿಸಿದರೆ ಸಾಯುವುದೆಂದು ತಿಳಿದು ಕೊಂಡವನು ಅದನ್ನು ತಿನ್ನಲು ಧೈರ್ಯ ತೋರಿಸಲಾರನು. ಇದೇ ರೀತಿ ಪಾಪವನ್ನು ಅಪಾಯಕರ ವಿಷ ಎಂದು ದೃಢವಾಗಿ ನಂಬುವ ತನಕ ಅದರಿಂದ ರಕ್ಷಣೆ ಪಡೆಯಲು ಸಾಧ್ಯವಾಗಲಾರದು. ಈ ದೃಢ ನಂಬಿಕೆ ಜ್ಞಾನ ಮೂಲಕ ಹೊರತು ಲಭಿಸಲಾರದು.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬೇರೆ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ:

''ಧರ್ಮದ ಬೇರು ಅಲ್ಲಾಹನ ಬಗ್ಗೆ ಜ್ಞಾನ ಮತ್ತು ಅವನು ನೀಡಿದ ಅನುಗ್ರಹಗಳ ಬಗ್ಗೆ ಜ್ಞಾನವಾಗಿದೆ. ಅದರ ಶಾಖೆಗಳು ಸತ್ಕರ್ಮಗಳು ಆಗಿವೆ. ಅದರ ಹೂಗಳು ನೈತಿಕ ಗುಣಗಳಾಗಿವೆ ಅದರ ಫಲಗಳು ಆಧ್ಯಾತ್ಮಿಕ ಅನುಗ್ರಹಗಳು ಮತ್ತು ಅಲ್ಲಾಹನ ಬಗ್ಗೆಯೂ ಅವನ ದಾಸರ ಬಗ್ಗೆಯೂ ಉಂಟಾಗುವ ಸೂಕ್ಷ್ಮ ಪ್ರೇಮವಾಗಿವೆ. ಈ ಫಲ ಲಭಿಸಲು ಆಧ್ಯಾತ್ಮಿಕ ಪರಿಶುದ್ಧಿ ಮತ್ತು ಪಾವಿತ್ರ್ಯ ಆವಶ್ಯಕವಾಗಿವೆ.

ಜ್ಞಾನವು ಪರಿಪೂರ್ಣಗೊಳ್ಳುವಾಗ ಪ್ರೇಮವೂ ಪರಿಪೂರ್ಣಗೊಳ್ಳುತ್ತದೆ. ಜ್ಞಾನಗಳಿಸಿದ ಹಾಗೆ ದೇವ ಪ್ರೇಮವೂ ವರ್ಧಿಸುತ್ತಾ ಹೋಗುತ್ತದೆ. ದೇವ ಪ್ರೇಮವು ಯಾವಾಗ ಉಂಟಾಗುತ್ತದೆಯೋ ಅದೇ ದಿನ ಹೊಸ ಜನ್ಮದ ದಿನವಾಗಿರುತ್ತದೆ. ಆ ಗಳಿಗೆಯೇ ಹೊಸ ಲೋಕದ ಪ್ರಥಮ ಗಳಿಗೆ ಆಗಿರುತ್ತದೆ.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳಿದರು:

''ಅಲ್ಲಾಹನು ಒಂದು ಅಮೂಲ್ಯ ರತ್ನವಾಗಿರುವನು. ಅವನ ಬಗ್ಗೆ ಜ್ಞಾನಗಳಿಸಿದ ನಂತರ ಮನುಷ್ಯನು ಲೌಕಿಕ ವಸ್ತುಗಳನ್ನು ತಾತ್ಸಾರ ಭಾವನೆಯಿಂದ ನೋಡುತ್ತಾನೆ. ಅವುಗಳನ್ನು ನೋಡಲು ಅವನನ್ನು ಒತ್ತಾಯ ಪಡಿಸಬೇಕಾಗುತ್ತದೆ. ಅಲ್ಲಾಹನ ಬಗ್ಗೆ ಜ್ಞಾನಗಳಿಸಲು ಬಯಸಿರಿ. ಅವನ ಕಡೆಗೆ ಹೆಜ್ಜೆ ಹಾಕಿರಿ. ಅದರ ಮೂಲಕ ಜಯ ಲಭಿಸುವುದು.''

''ನಾನು ಸತ್ಯವಾಗಿ ಹೇಳುತ್ತೇನೆ ಮನುಷ್ಯನ ತಖ್ವಾ(ದೇವಭಯ), ಇಬಾದತ್(ಆರಾಧನೆ), ತ್ವಹಾರತ್(ಪರಿಶುದ್ಧಿ) ಎಲ್ಲವೂ ಆಕಾಶದಿಂದ ಬರುತ್ತವೆ. ಅವು ಅಲ್ಲಾಹನ ಅನುಗ್ರಹಗಳನ್ನು ಹೊಂದಿಕೊಂಡಿವೆ. ಅಲ್ಲಾಹನು ಇಚ್ಛಿಸುವುದಾದರೆ ಅದನ್ನು ಉಳಿಸುವನು. ಅಲ್ಲಾಹನು ಇಚ್ಛಿಸುವುದಾದರೆ ಅದನ್ನು ದೂರ ಸರಿಸುವನು. ಅಲ್ಲಾಹನ ಬಗ್ಗೆ ಸತ್ಯವಾದ ಜ್ಞಾನ ಲಭಿಸಿದರೆ ಮನುಷ್ಯನು ತನ್ನನ್ನು ನಿರರ್ಥಕನೆಂದು ಭಾವಿಸಿ ಅಲ್ಲಾಹನ ಸನ್ನಿಧಿಯಲ್ಲಿ ವಿನಯಾನ್ವಿತನಾಗಿ ಅವನ ಅನುಗ್ರಹವನ್ನು ಬೇಡಿಕೊಂಡು ತನ್ನ ವಿಷಯಾಭಿಲಾಷೆಗಳನ್ನು ಸುಟ್ಟುಹಾಕುವ ಪ್ರಕಾಶವನ್ನು ಬೇಡಿಕೊಳ್ಳಬೇಕು. ಅದು ಅವನೊಳಗೆ ಒಂದು ಪ್ರಕಾಶವನ್ನೂ ಒಳಿತುಗಳನ್ನು ಮಾಡಲು ಶಕ್ತಿಯನ್ನೂ ಉಂಟುಮಾಡುವುದು. ಒಬ್ಬನಿಗೆ ಅಲ್ಲಾಹನ ಅನುಗ್ರಹ ಲಭಿಸಿದರೆ ಮತ್ತು ಹೃದಯ ವೈಶಾಲ್ಯತೆ ಉಂಟಾದರೆ ಅದರ ಬಗ್ಗೆ ಅಹಂಕಾರ ಭರಿತನಾಗದೆ ವಿನಯದಲ್ಲಿ ಮುಂದುವರಿಯಬೇಕು. ಏಕೆಂದರೆ ಒಬ್ಬನು ತಾನು ಏನೂ ಅಲ್ಲ ಎಂಬ ಭಾವನೆಯಿಂದ ವಿನಯಾನ್ವಿತನಾದರೆ ಅಲ್ಲಾಹನು ಅವನ ಮೇಲೆ ಪ್ರಕಾಶವನ್ನು ಇಳಿಸುವನು ಮತ್ತು ಅವನು ಬೆಳಕನ್ನೂ ಶಕ್ತಿಯನ್ನೂ ಪಡೆಯುವನು. ಮನುಷ್ಯನು ಈ ರೀತಿ ನಂಬಿಕೆ ಹೊಂದಿದರೆ ಅಲ್ಲಾಹನ ಅನುಗ್ರಹದಿಂದ ಅವನ ಸ್ವಭಾವ ಗುಣಗಳು ಉತ್ತಮಗೊಳ್ಳುವುದು. ಲೋಕದಲ್ಲಿ ನಾನೊಬ್ಬ ಮಹತ್ವಶಾಲಿ ಎಂದು ಭಾವಿಸುವುದು ದುರಹಂಕಾರವಾಗಿದೆ.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಈ ಉದ್ದೇಶ ಲಕ್ಷ್ಯಗಳನ್ನು ಈಡೇರಿಸಲು ಅಲ್ಲಾಹನು ಕಳುಹಿಸಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಲ್ಲಿ ಎಂತಹ ಜ್ಞಾನ ಉಂಟುಮಾಡಿದರೆಂದರೆ ನಾವು ಅಲ್ಲಾಹನನ್ನು

ನೋಡುತ್ತಿರುವೆವೋ ಎಂಬಂತೆ ಆಯಿತು. ಹಾಗೂ ನಮ್ಮ ಪ್ರತಿಯೊಂದು ಕೆಲಸವನ್ನು ಅಲ್ಲಾಹನ ಪ್ರೀತಿ ಮತ್ತು ಭಯವನ್ನು ಮುಂದಿರಿಸಿಕೊಂಡು ಮಾಡುವಂತೆ ಆಯಿತು. ನಮ್ಮ ಎಲ್ಲಾ ಪಾಪಗಳನ್ನು ಸುಟ್ಟು ಹಾಕುವಂತಹ ದೇವಜ್ಞಾನವು ನಮಗೆ ಲಭಿಸುವಂತಾಗಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶ ಲಕ್ಷ್ಯಗಳನ್ನು ಈಡೇರಿಸುವವರಾಗಲಿ. ಅಲ್ಲಾಹನು ನಮಗೆ ಈ ಎಲ್ಲಾ ಉಪದೇಶಗಳನ್ನು ಅನುಷ್ಠಾನಕ್ಕೆ ತರಲು ಮತ್ತು ಅವುಗಳನ್ನು ಅರ್ಥಮಾಡಿಕೊಳ್ಳಲು ತೌಫೀಕ್ ನೀಡಲಿ.

————————————*****————————————

*Friday Sermon delivered by Hadrath Khaleefathul Masih Al Khamis* (atba)

*at Masjid Baithul Futhuh, London on 07-03-2014*

***Kannada Translation:*** M Ubeidullah

***Revised by:*** M P Ibrahim | ***Typing:*** U Basheer Ahmad

***Published By:*** Kannada Isha'at Team

*Email*: **khutuba.kannada@gmail.com**